<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

ಪಾಟೀ ಸವಾಲುಃ- ಶ್ರೀ ಎಸ್ ಪಿ. ವಕೀಲರಿಂದ ವಾದಿಯ ಪರವಾಗಿ

15. ಈ ಕೇಸಿಗೆ ಸಂಬಂದಪಟ್ಟಂತೆ ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿದೆ. ನಾನು ವಕೀಲರ ಕಚೇರಿಗೆ ಬೇಟಿ ನೀಡುವ ಮೊದಲೇ ನನ್ನ ಪ್ರಮಾಣ ಪತ್ರವನ್ನು ಮುದ್ರಿಸಲಾಗಿತ್ತು. ಸಾಕ್ಷಿ ಮುಂದುವರಿದು, ಅದನ್ನು ನಾನು ಓದಿ ಖುದ್ದಾಗಿ ಸಹಿ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಓದಿ ನಂತರ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

16. ನನ್ನ ಅಜ್ಜ ಹಾಗೂ ಅಪ್ಪ ಒಟ್ಟಿಗೆ ಕರ್ನಾಟಕಕ್ಕೆ ಬಂದಿರುತ್ತಾರೆ. ಆ ಸಮಯದಲ್ಲಿ ನಾವು ಜನಿಸಿರಲಿಲ್ಲ. ನನ್ನ ತಂದೆಯೊಂದಿಗೆ ಐದು ಜನ ಅಣ್ಣ ತಮ್ಮಂದಿರು. ಕರ್ನಾಟಕಕ್ಕೆ ಬರುವಾಗ ಅಜ್ಜನೊಂದಿಗೆ ಮೂರು ಜನ ಬಂದರು, ನಂತರ ಇಬ್ಬರು ಬಂದರು. ನನ್ನ ತಾತಾನೊಂದಿಗೆ ಕರ್ನಾಟಕಕ್ಕೆ ನನ್ನ ತಂದೆ, ಅರ್ಜುನ್ ಹಾಗೂ ಗಂಗಾದರ್ ಬಂದಿರುತ್ತಾರೆ. ನನ್ನ ಅಜ್ಜನ ಹೆಸರು ನಿಲಂಕಂಠನ್ ಆದರೆ ಇನಿಷಿಯಲ್ ಗೊತ್ತಿಲ್ಲ. ನನ್ನ ಅಜ್ಜನವರಿಗೆ ನಾಯರ್ ಎಂಬ ಪದನಾಮ ಇರಲಿಲ್ಲ. ನನ್ನ ತಾಯಿ ಸಹ ಕೇರಳದವರು. ನನ್ನತಂದೆ ಕರ್ನಾಟಕಕ್ಕೆ ಬಂದ ನಂತರ ಮದುವೆಯಾಗಿರುತ್ತಾರೆ. ನನ್ನ ತಾಯಿ ಬಿಲ್ಲವ ಜಾತಿಗೆ ಸೇರಿದವರು. ನನ್ನ ತಾಯಿಯ ಸಹೋದರ ಮತ್ತು ಸಹೋದರಿಯರು ಬದುಕಿದ್ದಾರೆ. ಅವರೊಂದಿಗೆ ನಾನು ಈಗಲೂ ಸಹ ಓಡನಾಟದಲ್ಲಿದ್ದೇನೆ. ನನ್ನ ತಾಯಿಯವರು ಯಾವ ಜಾತಿಗೆ ಸೇರಿದವರು ಎಂದು ತೋರಿಸಲು ಈಗ ನನ್ನ ಬಳಿ ದಾಖಲಾತಿ ಇಲ್ಲ, ಆದರೆ ತಯಾರು ಮಾಡಬೇಕು. ನನ್ನ ತಂದೆಯವರು ಕೇರಳದಲ್ಲಿ ಇದ್ದ ಯಾವುದೇ ಆಸ್ತಿಯನ್ನು ಮಾರಾಟ ಮಾಡಿ ಕರ್ನಾಟಕಕ್ಕೆ ಬಂದಿರುವುದಿಲ್ಲ. ಅವುಗಳನ್ನು ಹಾಗೆಯೇ ಬಿಟ್ಟು ಬಂದಿರುತ್ತಾರೆ. ಸದರಿ ಆಸ್ತಿ ಈಗಲೂ ಇದೆಯಾ ಎಂದರೆ ಸಾಕ್ಷಿಯು ಇಲ್ಲ, ಗೇಣಿ ಆಧಾರದ ಮೇಲೆ ಈಗ ಬೇರೆಯವರು ಮಾಡಿಕೊಂಡಿದ್ದಾರೆ, ಅವರ ಹೆಸರು ಸಹ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಈಗ ಉಳುವೆ ಮಾಡುತ್ತಿರುವವರು ನನ್ನ ಸಂಬಂಧಿಕರಲ್ಲ. ನನ್ನ ತಂದೆಯವರು ಯಾವ ಮೂಲದಿಂದ ಕರ್ನಾಟಕಕ್ಕೆ ಬಂದಿದ್ದಾರೆ ಎಂದು ತೋರಿಸಲು ದಾಖಲಾತಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಆಗ ನಾನು ಇರಲಿಲ್ಲ. ನನ್ನ ತಂದೆಯವರ ಜನನ ಪ್ರಮಾಣ ಪತ್ರ ಇರಲಿಲ್ಲ. ನಮ್ಮ



ತಂದೆಯವರಿಗೆ ಕರ್ನಾಟಕದಲ್ಲಿ ಚುನಾವಣಾ ಗುರುತಿನ ಚೀಟಿ ಹೊಂದಿದ್ದರು. ನಮ್ಮ

ತಂದೆಯ ಜೀವಿತ ಕಾಲದಲ್ಲಿ ಪಡಿತರ ಚೀಟಿ ಇತ್ತು. ಅದರ ಪ್ರತಿ ನನ್ನ ಬಳಿ ಇರುವುದಿಲ್ಲ.

17. ನನಗೆ ಈಗ 57 ವರ್ಷ ವಯಸ್ಸು. ನನ್ನ ತಂದೆಯವರು ದಿನಾಂಕ 08.02.2018 ರಲ್ಲಿ ಮೃತಪಟ್ಟಿರುತ್ತಾರೆ. ಅಲ್ಲಿಯವರೆಗೆ ನಮ್ಮ ತಂದೆಯ ಹೆಸರಿನಲ್ಲಿ ಪಡಿತರ ಚೀಟಿ ಇರಲಿಲ್ಲ, ಆದರೆ ನನ್ನ ಹೆಸರಿನಲ್ಲಿತ್ತು. ನನ್ನ ಹೆಸರಿಗೆ 1992-93 ರಲ್ಲಿ ಪಡಿತರ ಚೀಟಿ ಬದಲಾಗಿರುತ್ತದೆ. ನಮ್ಮ ತಂದೆಯವರಿಗೆ ಕುಟುಂಬವನ್ನು ನೋಡಿಕೊಳ್ಳಲು ಸಾಧ್ಯವಾಗದ ಕಾರಣ ಹಾಗೂ ನಾನು ಸ್ವಂತ ಮನೆ ಮಾಡಿಕೊಂಡ ಕಾರಣ ನನ್ನ ಹೆಸರಿಗೆ ಪಡಿತರ ಚೀಟಿಯನ್ನು ಬದಲಾಯಿಸಲಾಯಿತು. ಆ ರೀತಿ ಪಡಿತರ ಚೀಟಿಯನ್ನು ಬದಲಾಯಿಸಿಕೊಳ್ಳಲು, ಉಳಿಕೆ ಸದಸ್ಯರಿಂದ ಒಪ್ಪಿಗೆ ಪತ್ರ ಪಡೆದಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಂದೆಯವರೇ ಮಾಡಿಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ.

18. ನಮ್ಮ ಹಳೆಯ ಮನೆಯ ದಾಖಲಾತಿ ನಮ್ಮ ತಂದೆಯ ಹೆಸರಿನಲ್ಲಿತ್ತು, ಆದರೆ ಈಗ ಹಳೆಯ ಮನೆ ಇರುವುದಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಮನೆಯ ದಾಖಲಾತಿ ಇದ್ದವು ಎಂದು ತೋರಿಸಲು ಸಂಬಂದಪಟ್ಟ ಪಂಚಾಯಿತಿಯಿಂದ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇದೆ. ಏಕೆಂದರೆ ಆ ರೀತಿ ದಾಖಲಾತಿ ಲಭ್ಯವಿರುವುದಿಲ್ಲ. ನಾನು ವಾಸವಿರುವ ಮನೆಯ ದಾಖಲಾತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆಗೆ ಸಂಬಂದಪಟ್ಟ ಕೃಷಿ ಪಾಸ್ ಪುಸ್ತಕವನ್ನು ಹಾಜರುಪಡಿಸಲು ಆಗುವುದಿಲ್ಲ, ಏಕೆಂದರೆ ಅವರಿಗೆ ಕೃಷಿ ಪಾಸ್ ಪುಸ್ತಕ ಇರಲಿಲ್ಲ. ನನ್ನ ಹೆಸರಿನಲ್ಲಿ ಕೃಷಿ ಪಾಸ್ ಪುಸ್ತಕ ಸುಮಾರು 20 ವರ್ಷಗಳಿಂದ ಇದೆ. ಅದನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

19. ನಮ್ಮ ತಂದೆಯವರು ಕರ್ನಾಟಕಕ್ಕೆ ಬಂದು ಯಾವುದೇ ಆಸ್ತಿಯನ್ನು ಖರೀದಿ ಮಾಡಿಲ್ಲ, ಆದರೆ ಗೇಣಿ ಆಧಾರದ ಮೇಲೆ ಪುದುವೆಟ್ಟು ಗ್ರಾಮದಲ್ಲಿ ಆಸ್ತಿಯನ್ನು ಗೇಣಿಗೆ ವಹಿಸಿಕೊಳ್ಳಲಾಗಿದೆ. ಆ ರೀತಿ ಗೇಣಿಗೆ ನೀಡಿದ ಮಾಲೀಕರ ಹೆಸರು ನನಗೆ ನೆನಪಿಲ್ಲ. ಅವರ ಮಕ್ಕಳು ಸಹ ನನಗೆ ಪರಿಚಯ ಇರುವುದಿಲ್ಲ.

20. ನಮ್ಮ ತಂದೆಗೆ ಒಟ್ಟು ಇಬ್ಬರು ಮಕ್ಕಳು. ನಮಗೆ ತಂಗಿ ಇರುವುದಿಲ್ಲ. ನಾನು ಪುದುವೆಟ್ಟು ಗ್ರಾಮದಲ್ಲಿ 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಲು ತೊಂದರೆ ಇದೆ. ಹಾಗಾಗಿ ಹಾಜರು



ಪಡಿಸಲು ಆಗುವುದಿಲ್ಲ. ನಮ್ಮ ಶಾಲಾ ದಾಖಲಾತಿಯಲ್ಲಿ ನಮ್ಮ ತಂದೆಯ ಹೆಸರು ಎಮ್. ಎನ್ ಕುಮಾರನ್ ಎಂದು ಉಲ್ಲೇಖವಾಗಿದೆ. ಎಮ್ ಎಂದರೆ ಮುಂಡಿಯತ್ ಎಂಬ ಕುಟುಂಬದ ಹೆಸರು ಮತ್ತು ಎನ್ ಎಂದರೆ ನನ್ನ ತಾತಾ ನೀಲಕಂಠ.

21. ಎಷ್ಟು ವರ್ಷಗಳಿಂದ ನಿಮ್ಮ ತಂದೆ  ಗೇಣಿಗೆ ವಹಿಸಿಕೊಂಡಿದ್ದಾರೆ ಎಂದರೆ ಅಂದಾಜು 1976-77 ಇರಬಹುದು. ಸರ್ಕಾರಕ್ಕೆ ಪ್ರಮಾಣ ಪತ್ರ ಸಲ್ಲಿಸುವ 2-3 ವರ್ಷಗಳ ಹಿಂದಿನಿಂದ ಆ ರೀತಿ ಗೇಣಿಗೆ ವಹಿಸಿಕೊಂಡಿದ್ದರು. ನಮ್ಮ ತಂದೆ ಗೇಣಿಗೆ ವಹಿಸಿಕೊಂಡಾಗ ಅಂದಾಜು 7-8 ವರ್ಷ ವಯಸ್ಸು. ನನ್ನ ಅಣ್ಣ ನನಗಿಂತ 2 ವರ್ಷ ದೊಡ್ಡವರು. ನಮ್ಮ ತಂದೆಗೆ ನಮ್ಮ ತಾಯಿ ಮಾತ್ರ ಒಬ್ಬಳೇ  ಹೆಂಡತಿ. ಶೋಭ ಎಂಬುವವರು ಯಾರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಯಾವುದೇ ಮರಣ ಶಾಸನವನ್ನು ಮಾಡಿರುವುದಿಲ್ಲ.

22. ನಮ್ಮ ತಂದೆ ಮೃತ ಪಟ್ಟ ನಂತರ ನಮ್ಮ ಹೆಸರಿಗೆ ಒಂದು ವರ್ಷ ಕಳೆದ ಮೇಲೆ ಆಸ್ತಿಗಳು ವರ್ಗಾವಣೆಯಾಗಿರುತ್ತವೆ. ನಮ್ಮ ತಂದೆಯ ಮರಣ ನಂತರ ನನ್ನ ಹಾಗೂ 1 ನೇ ಪ್ರತಿವಾದಿಯ ಹೆಸರಿಗೆ ಆಸ್ತಿಗಳು ಬಂದಿರುತ್ತವೆ. ಆ ರೀತಿ ಆಸ್ತಿಗಳನ್ನು ನನ್ನ ಹಾಗೂ 1 ನೇ ಪ್ರತಿವಾದಿಯ ಹೆಸರಿಗೆ ಬದಲಾಸಿಕೊಳ್ಳುವಾಗ ನಮ್ಮ ತಂದೆಗೆ ನಾವು ಇಬ್ಬರೇ ಮಕ್ಕಳಾದ ಕಾರಣ ವಂಶವೃಕ್ಷವನ್ನು ಹಾಜರು ಪಡಿಸಿರುವುದಿಲ್ಲ. ನಂತರ ಆಸ್ತಿಗಳನ್ನು ನಾನು ಹಾಗೂ ಒಂದನೇ ಪ್ರತಿವಾದಿ ಸಮಾನಾಗಿ ಹಂಚಿಕೊಂಡಿರುತ್ತೇವೆ. ನಮ್ಮ ತಂದೆ ಮತ್ತು ತಾಯಿಯ ಗೋತ್ರ ನನಗೆ ಗೊತ್ತಿಲ್ಲ.

23. ನನಗೆ ವಿವಾಹವಾಗಿದ್ದು, ನಮಗೆ ಇಬ್ಬರು ಮಕ್ಕಳು. ನನ್ನ ಮಗಳಿಗೆ 31 ವರ್ಷ, ಆಕೆಗೆ ಮದುವೆಯಾಗಿದೆ, ನನ್ನ ಮಗನಿಗೆ 29 ವರ್ಷ, ಆತನಿಗೂ ಸಹ ಮದುವೆಯಾಗಿದೆ. ನನ್ನ ಮದುವೆಯ ಸಮಯದಲ್ಲಿ ಗೋತ್ರವನ್ನು ನೋಡಿದ್ದೇವೋ ಇಲ್ಲವೋ ನನಗೆ ನೆನಪಿಲ್ಲ. ನನ್ನ ಇಬ್ಬರು ಮಕ್ಕಳಿಗೂ ಸಹ ಮದುವೆ ಮಾಡುವಾಗ ಸದರಿ ವಿಚಾರವನ್ನು ನೋಡಿರುವುದಿಲ್ಲ.

24. ನಿಮ್ಮ ಊರಿನಲ್ಲಿ ಎಷ್ಟು ಜಾತಿಯ ಜನಾಂಗದವರು ಇದ್ದಾರೆ ಎಂದರೆ ಸಾಕ್ಷಿಯು ಮುಸಲ್ಮಾನರು, ಗೌಡರು, ಮಲಿಯಾಚಿ ಬಿಲ್ಲವರು ಮತ್ತು ತುಳು ಬಿಲ್ಲವರು ವಾಸವಿದ್ದಾರೆ. ಕೇರಳದಲ್ಲಿ ಜಾತಿಗಳು ಯಾವುವು ಎಂದು ಹೇಳಲಾಗುವುದಿಲ್ಲ, ಏಕೆಂದರೆ ನಾನು ಹುಟ್ಟಿ ಬೆಳೆದಿರುವುದು ಕರ್ನಾಟಕದಲ್ಲಿ. ನಮ್ಮ ತಾಯಿಯ ಕುಟುಂಬಸ್ಥರು ಬಿಲ್ಲವರು, ಅವರು ನಾರಾಯಣ ಗುರು ಬಿಲ್ಲವ ಸಂಘಕ್ಕೆ ಹೋಗುತ್ತಾರೆ.



25. ನಮ್ಮ ತಂದೆಯ ಸಹಿಯನ್ನು ಗುರುತು ನನಗೆ ಇರುವುದಿಲ್ಲ. ನಿಮ್ಮ ತಂದೆಯವರು ಸಹಿ ಹಾಕುತ್ತಿದ್ದರು. ಆದರೆ ಯಾವ ಭಾಷೆಯಲ್ಲಿ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಸಹಿ ಇರುವ ದಾಖಲಾತಿಯನ್ನು ಹಾಜರು ಪಡಿಸಲು ಆಗುವುದಿಲ್ಲ.

26. ವಾದಿಯ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದುವರಿದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

Sd/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ